ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 40-49
©*IIMRD*, Mysuru

IIMRD JOURNALS

www.iimrd.com

# ಕಣಿಯನ್ ಸಮುದಾಯದ ಧಾರ್ಮಿಕ ನಂಬಿಕೆಗಳು

**ಡಾ. ಲೋಕೇಶ ಎಸ್**

ಮಾನವಶಾಸ್ತ್ರ ಸಂಶೋಧಕರು, ಐಐಎಂಆರ್‌ಡಿ, ಮೈಸೂರು

**ಸಾರಾಂಶ: (Abstract)**

*ಮಾನವ ಯಾವುದನ್ನು ಪವಿತ್ರ ಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂಬ (ರಿಲಿಜನ್)ಶಬ್ದದ ವಿಶಾಲಾರ್ಥ. ಪವಿತ್ರವೆನಿಸತಕ್ಕದು ಅತಿಮಾನುಷವೇ ಇರಬೇಕೆಂಬ ನಿಯಮವಿಲ್ಲ; ಮಾನವಾಕೃತಿಯಲ್ಲಿಯೇ ಇರಬೇಕೆಂದೂ ಇಲ್ಲ; ವೈಯಕ್ತಿಕ ಭಾವನೆ ಮಾತ್ರವೆಂದೂ ಅದರರ್ಥವಲ್ಲ. ದೇವರು ಎಂಬ ಶಬ್ದವನ್ನು ವೈಯಕ್ತಿಕ ಇಲ್ಲವೆ ಅತಿಮಾನುಷವೆಂಬ ಅಭಿಪ್ರಾಯದಲ್ಲಿ ಬಳಸುವುದಾದರೆ, ಅಂಥ ದೇವತಾಸ್ವರೂಪಗಳೊಡನೆ ಮಾನವನ ಸಂಬಂಧ ಧರ್ಮವೆನಿಸುವಂತೆ, ಅಂಥವುಗಳಲ್ಲದ ಪವಿತ್ರ ವಸ್ತುಗಳೊಂದಿಗೆ ಅವನ ಸಂಬಂಧಕ್ಕೂ ಅನ್ವಯಿಸುವಷ್ಟು ಅದು ವಿಶಾಲವಾಗಿದೆ.*

**ಮುಖ್ಯಪದಗಳು (Keywords):** *ಮಾನವಶಾಸ್ತ್ರ, ಧಾರ್ಮಿಕ ನಂಬಿಕೆ, ಪೂರ್ವಿಕರ ಆರಾಧನೆ, ಕಣಿಯನ್ ಸಮುದಾಯ*

## ಪೀಠಿಕೆ

ನಮ್ಮ ಪೂರ್ವಿಕರು ಆತ್ಮದ ಮೇಲೆ ನಂಬಿಕೆ ಹೊಂದಿದವರಾಗಿದ್ದರು. ಪೂರ್ವಜರ ಆರಾಧನೆಯಿಂದ ಧರ್ಮ ಹುಟ್ಟಿತು ಎಂದು ಹರ್ಬರ್ಟ್ ಸ್ಪೆನ್ಸರನೂ, ಯಕ್ಷಿಣಿ, ಮಂತ್ರ, ಮಾಟಗಳಿಂದ ಹುಟ್ಟಿತೆಂದು ಜೇಮ್ಸ್ ಫ್ರೇಜರನೂ ಹೇಳುತ್ತಾರೆ. ಭಯ, ಭೀತಿ, ಆಶ್ಚರ್ಯಗಳಿಂದ ನಿಸರ್ಗದ ವೈಚಿತ್ರ್ಯದ ಫಲವಾಗಿ ಧರ್ಮ ಹುಟ್ಟಿದೆ, ಅದೇ ಪ್ರಾಚೀನ ಸಮುದಾಯಗಳಲ್ಲೂ ಕಂಡುಬರುವ ಧರ್ಮವಾಗಿದೆ ಎಂದು ವಾದಿಸುವವರೂ ಇದ್ದಾರೆ. ಇಂದು ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ಅನೇಕ ಪದ್ಧತಿ ಪರಂಪರೆಗಳಿಗೆ ಅತಿ ಪ್ರಾಚೀನ ಇತಿಹಾಸ ಇದೆ. ಅದರ ಆಚಾರ ವಿಚಾರಗಳಲ್ಲಿ ಕೆಲವು ವೈಜ್ಞಾನಿಕವೆನ್ನಿಸಿದರೆ ಹಲವು ಅಜ್ಞಾನದ್ಯೋತಕವಾಗಿಯೂ ಇವೆ. ಆದಿವಾಸಿಗಳಿಗೆ ಜೀವ, ಆತ್ಮದ ಬಗ್ಗೆ ನಂಬಿಕೆ ಇತ್ತು. ಬಹುಶಃ ನೀರಿನ ಪ್ರತಿಬಿಂಬ, ನೆರಳು, ಮರಣ, ಕನಸು ಮುಂತಾದವುಗಳ ಅನುಭವದಿಂದ ಆತ್ಮದ ಕಲ್ಪನೆ ಅವರಿಗೆ ಬಂದಿರಬೇಕು. ಸತ್ತವನ ಆತ್ಮ ಹಿಂತಿರುಗಿ ಬರುತ್ತದೆ ಅಥವಾ ಇನ್ನೊಂದು ಲೋಕಕ್ಕೆ ಹೋಗುತ್ತದೆ ಎಂಬ ನಂಬಿಕೆಯಿತ್ತು. ಆದಕಾರಣ ಸತ್ತವನ ಅನುಕೂಲತೆಗಾಗಿ ಅವನಿಗೆ ಪ್ರಿಯವಾಗಿದ್ದ ವಸ್ತುಗಳನ್ನು ಆತನೊಂದಿಗೆ ಇಡುತ್ತಿದ್ದರು. ಆತ್ಮವೆಂಬ ಚೈತನ್ಯ ಅಥವಾ ಶಕ್ತಿ ಗಿಡ, ಮರ, ಪ್ರಾಣಿ, ಬೆಟ್ಟ, ಗುಡ್ಡ, ಕಲ್ಲು, ನಕ್ಷತ್ರ, ಚಂದ್ರ

ಮೊದಲಾದುವುಗಳಲ್ಲಿ ವಾಸಿಸುತ್ತದೆ ಎಂಬ ನಂಬಿಕೆ ಇದ್ದುದರ ಫಲವಾಗಿ ವೃಕ್ಷಪೂಜೆ, ಪ್ರಾಣಿಪೂಜೆ, ನರಬಲಿ, ಕುಲಸಂಕೇತಗಳ ಆರಾಧನೆ, ವಿಧಿ ನಿಷಿದ್ಧಗಳ ಪರಂಪರೆ (ಟ್ಯಾಬೂ), ಪ್ರಕೃತಿಯ ಆರಾಧನೆ, ಭೂತಾರಾಧನೆ, ಪೂರ್ವಜರ ಆರಾಧನೆ ಇತ್ಯಾದಿ ಕಂಡುಬರುತ್ತದೆ. ದೈವಶಕ್ತಿಗಳನ್ನು ಒಲಿಸಿಕೊಳ್ಳಲು ಮಾಡಿದ ಈ ಪ್ರಯತ್ನಗಳ ಫಲವಾಗಿ ಅವರಲ್ಲಿ ಪ್ರಾರ್ಥನೆ, ನೃತ್ಯ, ಗೀತ, ಬಲಿ, ಕಾಣಿಕೆ, ಪೂಜಾಪದ್ಧತಿಗಳೂ ಇದಕ್ಕೆ ತಕ್ಕಂತೆ ಯಕ್ಷಿಣಿಕಾರ, ಮಂತ್ರಮಾಟಕಾರ, ಪುರೋಹಿತ ವರ್ಗದವರು ನೇಮಕಗೊಂಡರು. ಸಿಡಿಲು, ಗುಡುಗು, ಮಳೆ, ಪ್ರವಾಹ, ಜ್ವಾಲಾಮುಖಿ, ಭೂಕಂಪಗಳು ಆದಿವಾಸಿಗಳ ಪ್ರಕೃತಿ ಪೂಜೆ, ದೈವ ಕಲ್ಪನೆಗಳಿಗೆ ಕಾರಣವಾಗಿರಬೇಕು. ಸತ್ತವರ ಆತ್ಮದ ಪ್ರೀತ್ಯರ್ಥ ಹಬ್ಬ, ಉತ್ಸವ, ಭೂತಾರಾಧನೆಗಳು ನಡೆಯುತ್ತಿದ್ದವು. ಪ್ರಾಚೀನ ಸಮುದಾಯಗಳಲ್ಲಿ ಪೂರ್ವಜರ ಆರಾಧನೆಗೆ ಮಹತ್ವದ ಸ್ಥಾನವಿತ್ತು. ಮಾನವ ಸಮಾಜದ ವಿಕಾಸದ ಇತಿಹಾಸದಲ್ಲಿ ಆದಿವಾಸಿ ಧರ್ಮ ಹಿರಿಯ ಪಾತ್ರವಹಿಸಿದೆ.

ಸಾಮಾಜಿಕತೆ ಮತ್ತು ಧಾರ್ಮಿಕತೆಯು ಒಂದೇ ನಾಣ್ಯದ ಎರಡು ಮುಖಗಳು. ಯಾರು ಒಪ್ಪಲಿ ಅಥವಾ ಬಿಡಲಿ ಸಮಾಜದಲ್ಲಿ ವ್ಯಕ್ತಿಯ ಜೀವನವು ಅನೇಕ ನಂಬಿಕೆ, ಆಚಾರ– ವಿಚಾರಗಳ ಧಾರ್ಮಿಕತೆಯನ್ನು ಒಳಗೊಂಡಿರುತ್ತವೆ. ಮಾನವನ ಧಾರ್ಮಿಕ ಕ್ರಿಯೆಗಳು ವ್ಯಕ್ತಿಯ ಜಾತಿ, ಅಂತಸ್ತು, ವಿದ್ಯೆಯಸ್ಥಾನವನ್ನೂ ಮೀರಿ ಸಾಮಾಜಿಕ, ಆರ್ಥಿಕ, ರಾಜಕೀಯ, ವಾಣಿಜ್ಯ, ವ್ಯಾಪಾರ ಇತ್ಯಾದಿ ಕ್ರಿಯೆಗಳಲ್ಲಿ ಬಹು ಪ್ರಮುಖವಾದುದು. ಸಮಾಜವನ್ನು ಹಾಗೂ ವ್ಯಕ್ತಿಯ ನಡವಳಿಕೆಯನ್ನು ನಿಯಂತ್ರಿಸಲು ಧರ್ಮ ಪ್ರಮುಖ ಪಾತ್ರವಹಿಸುತ್ತದೆ. ಧರ್ಮದಿಂದ ಧರ್ಮಕ್ಕೆ ನಂಬಿಕೆಗಳು, ಸಂಸ್ಕಾರಗಳು, ಚಿಹ್ನೆಗಳು ಬೇರೆ ಬೇರೆ ಇರಬಹುದು. ಆದರೆ ನಂಬಿಕೆಗಳು, ಸಂಸ್ಕಾರಗಳುಮತ್ತು ಚಿಹ್ನೆಗಳು ಪ್ರತಿ ಧರ್ಮದ ಮುಖ್ಯ ಅಂಶಗಳಾಗಿರುತ್ತವೆ.

ದೈವದತ್ತವಾದ ವಿಶಿಷ್ಟ ಶಕ್ತಿಯಲ್ಲಿ ಕಣಿಯನ್‌ರಿಗೆ ಬಹಳ ನಂಬಿಕೆ. ಇಂತಹ ಶಕ್ತಿಗೆ ಮನುಷ್ಯನ ಬದುಕನ್ನು ನಿಯಂತ್ರಿಸುವ ಶಕ್ತಿಯಿದೆಯೆಂದು ಮತ್ತು ಒಂದು ವೇಳೆ ಇಂತಹ ಶಕ್ತಿಯ ವಿರುದ್ಧ ನಡೆದರೆ ತಮಗೆ ಆ ದೇವರು ಶಿಕ್ಷೆ ಕೊಡುತ್ತಾರೆ ಎಂಬ ಭಯ ಇವರಲ್ಲಿದೆ. ಇಂತಹ ಒಂದು ನಂಬಿಕೆಯು ಮಾನವನ ನಡತೆಯನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವ ಅನೌಪಚಾರಿಕ ನಿಯಂತ್ರಣ ಕ್ರಿಯೆಯಾಗಿರುತ್ತದೆ. ಕಣಿಯನ್‌ರಲ್ಲಿ ವಿದ್ಯಾವಂತ–ಅವಿದ್ಯಾವಂತ ಎಂಬ ಯಾವುದೇ ವ್ಯತ್ಯಾಸವಿಲ್ಲದೆ ಎಲ್ಲರೂ ದೇವರು ಮತ್ತು ದೇವತೆಗಳನ್ನು ನಂಬುತ್ತಾರೆ.

ಕಣಿಯನ್ ಸಮುದಾಯದವರು ಶ್ರೀ ರಾಮಾನುಜಾಚಾರ್ಯರ ಅನುಯಾಯಿಗಳಾಗಿದ್ದು, ಸಾವಿರಾರು ವರ್ಷಗಳಿಂದ ವೈಷ್ಣವ ಧರ್ಮವನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. 1948 ಸೆಪ್ಟೆಂಬರ್ 10 ರಂದು ಹೊಸ ಮಾಲಂಗಿ ಗ್ರಾಮದ ಕಣಿಯನ್ ಸಮುದಾಯದ ಮುಖಂಡರಾದ ಪಂಡಿತ್ ಬೆಳ್ಳಿದಾಸರವರು ಕಣಿಯ ಸಮುದಾಯದವರು ವಾಸಿಸುವ 92 ಗ್ರಾಮಗಳ ಕಣಿಯನ್ ಮುಖಂಡರುಗಳಿಗೆ ಕಳುಹಿಸಿರುವ ಸುತ್ತೋಲೆಯಲ್ಲಿ 'ಕಣಿಯರು ರಾಮಾನುಜಚಾರ್ಯರಿಗಿಂತ ಮೊದಲೇ ಅಂದರೆ ಆಳ್ವಾರ ಕಾಲದಲ್ಲಿ ಕಣಿಕಣ್ಣನ್ ಎಂಬುವವರು ತಿರುಮಲೈಸೈ ಆಳ್ವಾರವರ ಶಿಷ್ಯರಾಗಿದ್ದರು ಎಂಬುದನ್ನು ಉಲ್ಲೇಖಿಸಿದ್ದಾರೆ. ರಾಮಾನುಜಾಚಾರ್ಯರು ಕೂಡ ಕಣಿಯನ್ ಸಮುದಾಯದವರಿಗೆ ವೈಷ್ಣವ ದೀಕ್ಷೆಯನ್ನು ನೀಡಿದ್ದರಿಂದ

ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ರಾಮಾನುಜಚಾರ್ಯರ ಶಿಕ್ಷಕರೊಬ್ಬರು ತಿರುಮಲನ್ ಆಳ್ವಾರ ಮಾರ್ಗದರ್ಶನದ ಮೂಲಕ ಗೋವಿಂದರಾಯ ಪಟ್ಟಣದಿಂದ ಬಂದು ಅವರ ಮಾರ್ಗದರ್ಶನದಂತೆ ಕಣಿಯನ್ ಸಮುದಾಯದವರಿಗೆ ಪಂಚಸಂಸ್ಕಾರವನ್ನು ನೀಡಿ ದೇವಾಲಯಗಳ ಪ್ರವೇಶಕ್ಕೆ ಅನುಮತಿ ನೀಡುವ ಮೂಲಕ ಕಣಿಯರು ಕೂಡ ಶುದ್ಧತೆ ಮತ್ತು ಮಡಿವಂತಿಕೆಯಿಂದ ಇರುವವರು ಎಂಬುದಾಗಿ ಪರಿಗಣಿಸಿ ನಾಲ್ಕನೇ ಪಂಥಕ್ಕೆ ಸೇರಿಸಿದ್ದಾರೆ.

ಶ್ರೀವೈಷ್ಣವ ಧರ್ಮದವರಾದ ಕಣಿಯರು ಹಣೆಗೆ ಮೂರು ನಾಮವನ್ನು ಹಾಕುತ್ತಾರೆ. ಎಡ–ಬಲದಲ್ಲಿ ಬಿಳಿನಾಮ ಮತ್ತು ಮಧ್ಯದಲ್ಲಿ ಕೆಂಪುನಾಮವನ್ನು ಹಾಕುತ್ತಾರೆ ಮತ್ತು ಬಲ ಮತ್ತು ಎಡ ತೋಳುಗಳಿಗೆ ಶಂಖ ಚಕ್ರ ಮುದ್ರೆಯನ್ನು ಹಾಕಿಸಿಕೊಳ್ಳುತ್ತಾರೆ. ಕಣಿಯರು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನಲ್ಲಿರುವ ಬಿಳಿಗಿರಿರಂಗನಾಥ ಬೆಟ್ಟದ ಬಿಳಿಗಿರಿರಂಗ ಸ್ವಾಮಿ ಮತ್ತು ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನಲ್ಲಿರುವ ಮೇಲುಕೋಟೆಯ ಚಲುವನಾರಾಯಣಸ್ವಾಮಿ, ತಿರುಪತಿಯ ವೆಂಕಟರಮಣಸ್ವಾಮಿ, ಶ್ರೀನಿವಾಸ ಮುಂತಾದ ವೈಷ್ಣವ ದೇವರುಗಳನ್ನು ಪೂಜಿಸುತ್ತಾರೆ.

ಈ ಮೊದಲು ಅಂದರೆ ಶ್ರೀ ರಾಮಾನುಜಾಚಾರ್ಯರು ದೀಕ್ಷೆ ನೀಡುವ ಮುನ್ನ ಇವರು ಹರ (ಶಿವ)ನ ಆರಾಧಕರಾಗಿದ್ದರು. ನಂತರ ಹರಿ (ವಿಷ್ಣು)ಯ ಆರಾಧಕರಾಗಿ ಬದಲಾಗಿದ್ದಾರೆ. ಇಂದಿಗೂ ಕೂಡ ಅನೇಕ ಕಣಿಯನ್ ಕುಟುಂಬಗಳು ಶಿವನ ಭಕ್ತರಾಗಿದ್ದು, ನಂಜನಗೂಡಿನ ಶ್ರೀಕಂಠೇಶ್ವರ, ಮುಡುಕುತೊರೆಯ ಮಲ್ಲಿಕಾರ್ಜುನಸ್ವಾಮಿ, ಚೌಡೇಶ್ವರಿ, ಮಾರಮ್ಮ, ರಾಜೇಶ್ವರಿ, ಸಾವುಕಮ್ಮ, ರಾಚಪ್ಪಾಜಿ, ಸಿದ್ಧಪ್ಪಾಜಿ, ಮಂಟೆಲಿಂಗಯ್ಯ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಆದರೂ ಕೂಡ ಇವರು ಶೈವರು ಎಂಬುದಾಗಿ ಗುರುತಿಸಿಕೊಳ್ಳುವ ಬದಲಾಗಿ ತಾವು ಕೂಡ ವೈಷ್ಣವರೆ ಎಂದು ಹೇಳಿಕೊಳ್ಳುತ್ತಾರೆ.

ಕಣಿಯನ್ ಸಮುದಾಯದವರು ವಾಸಿಸುವ ಗ್ರಾಮದ ಕೇರಿಗಳಲ್ಲಿ ರಾಮಮಂದಿರವನ್ನು ನಿರ್ಮಿಸಿಕೊಂಡಿದ್ದು, ಪ್ರತಿದಿನ ಸಂಜೆ ಅಥವ ರಾತ್ರಿ ಮತ್ತು ಶನಿವಾರದಂದು ಒಟ್ಟಾಗಿ ಸೇರುತ್ತಾರೆ. ಶನಿವಾರದಂದು ಮನೆಗೊಬ್ಬರಂತೆ ರಾಮಮಂದಿರಕ್ಕೆ ಪೂಜೆ ಮಾಡಿ ಪ್ರಸಾದವನ್ನು ಮಾಡಿ ಹಂಚುತ್ತಾರೆ. ಕಣಿಯನ್‌ರಿಗೆ ದೇವರ ಮೇಲೆ ಅಪಾರವಾದ ದೈವಭಕ್ತಿಯಿದ್ದರೂ ಕೂಡ ಯಾವುದೇ ಗ್ರಾಮದಲ್ಲಿ ಪ್ರತ್ಯೇಕ ದೇವಸ್ಥಾನವಿಲ್ಲ. ಬದಲಿಗೆ ಎಲ್ಲಾ ಸಮುದಾಯವರು ಪೂಜಿಸುವ ದೇವಸ್ಥಾನಗಳಲ್ಲಿಯೇ ಪೂಜೆಯನ್ನು ಸಲ್ಲಿಸುತ್ತಾರೆ.

ಸ್ವರ್ಗ–ನರಕದ ಬಗ್ಗೆ ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ಕಣಿಯನ್‌ರಿಗೆ ಸ್ವರ್ಗ ಮತ್ತು ನರಕದ ಬಗ್ಗೆ ನಂಬಿಕೆಯಿರುವಂತೆ ಆತ್ಮಗಳು ಅಸ್ತಿತ್ವದಲ್ಲಿರುವುದನ್ನು ನಂಬುತ್ತಾರೆ. ದೇಹಕ್ಕೆ ಸಾವಿದೆಯೇ ವಿನಃ ಆತ್ಮಕ್ಕಲ್ಲ ಎಂಬುದಾಗಿ ಹೇಳುತ್ತಾರೆ. ಒಬ್ಬ ವ್ಯಕ್ತಿ ಮೃತನಾದರೆ ಅವರು ಮತ್ತೇ ಹುಟ್ಟಿ ಬರುತ್ತಾರೆ ಎಂಬುದು ಅವರ ನಂಬಿಕೆಯಾಗಿದೆ. ಕಣಿಯನ್‌ರಿಗೆ ಮಾಟ–ಮಂತ್ರ, ದೆವ್ವ, ಪಿಶಾಚಿಗಳ ಬಗ್ಗೆಯೂ ಕೂಡ ನಂಬಿಕೆಯಿದೆ.

ಜ್ಯೋತಿಷ್ಯ ಅಥವಾ ಭವಿಷ್ಯ ಹೇಳುವುದು ಇವರ ಮೂಲ ವೃತ್ತಿ. ಸಾಮಾನ್ಯ ಜನರು ಯಾವುದೇ ಶುಭ–ಅಶುಭ ಕಾರ್ಯ ಮಾಡಲು, ಕಷ್ಟಕ್ಕೆ ಕಾರಣ ಮತ್ತು ಪರಿಹಾರ ಮುಂತಾದವುಗಳಿಗೆ ಕಣಿಯರ ಬಳಿ ಬಂದು

ಪರಿಹಾರ ಕಂಡು ಕೊಳ್ಳುತ್ತಾರೆ. ಟಿ. ನರಸೀಪುರ ತಾಲೂಕಿನ ಸೋಸಲೆ ಗ್ರಾಮದ ಪಂಡಿತ್ ಎಸ್.ಆರ್. ಮುತ್ತುಸ್ವಾಮಿ, ಪಂಡಿತ್ ಆರ್ ದಿನೇಶ್ ಮತ್ತು ಇವರ ತಂಗಿಯರಾದ ಶಕುಂತಲ, ಪಂಡಿತ್ ಎಂ. ಧ್ರುವರಾಜ್, ಪಂಡಿತ್ ಸುಂದರ ಮೂರ್ತಿ ಹಾಗೂ ಬೈರಾಪುರದ ಹೊಸ ಬಡಾವಣೆಯಲ್ಲಿರುವ ಪಂಡಿತ್ ಎಂ.ಕೆ. ಶ್ರೀನಿವಾಸ ಇವರೊಂದಿಗೆ ಅನೇಕರು ಜ್ಯೋತಿಷ್ಯವನ್ನು; ಜ್ಯೋತಿಷ್ಯದ ಜೊತೆಗೆ ಅನೇಕ ಕಾಯಿಲೆಗೆ ಗಿಡಮೂಲಿಕ ಔಷದಗಳನ್ನು ದೈವತ್ವದೊಂದಿಗೆ ಸಮೀಕರಿಸಿ ನೀಡುತ್ತಾರೆ. ಟಿ.ನರಸೀಪುರದ ಹನುಮನಾಳು ಗ್ರಾಮದ ಶ್ರೀನಿವಾಸಯ್ಯ ಎಂಬುವರರು ಹಾವು ಕಚ್ಚಿದವರಿಗೆ ಮತ್ತು ಇತರ ಕ್ರಿಮಿಕೀಟಗಳ ಕಡಿತಕ್ಕೆ ಒಳಗಾದವರಿಗೆ ಗಿಡಮೂಲಿಕೆ ಔಷದ ಕೊಡುತ್ತಾರೆ. ಔಷದ ನೀಡುವಾಗ ವಿವಿಧ ಧಾರ್ಮಿಕ ವಿದಿ–ವಿಧಾನಗಳನ್ನು ಅನುಸರಿಸುತ್ತಾರೆ. ಔಷದವನ್ನು ಯಾವ ಪ್ರಮಾಣದಲ್ಲಿ ನೀಡಬೇಕು ಎಂಬುದನ್ನು ರೋಗಿಯ ಮಾನಸಿಕ ಮತ್ತು ದೈಹಿಕ ಸ್ಥಿತಿ ಮತ್ತು ದೇಹದಲ್ಲಿನ ವಿಷದ ಪ್ರಮಾಣವನ್ನು ನೋಡಿಕೊಂಡು ಮಂತ್ರ ಉಚ್ಚರಿಸುತ್ತಾ ಔಷದವನ್ನು ನೀಡಿ ವಿಷದ ಪ್ರಮಾಣ ಕಡಿಮೆ ಮಾಡುವ ಮುಖೇನ ಗುಣಪಡಿಸುತ್ತಾರೆ. ಔಷದ ನೀಡುವ ಸಂದರ್ಭದಲ್ಲಿ ರೋಗಿ ಅಥವಾ ಕಡಿತಕ್ಕೊಳಗಾದ ವ್ಯಕ್ತಿಯು ನಿದ್ರಿಸದಂತೆ ಎಚ್ಚರಿಕೆವಹಿಸುತ್ತಾರೆ.

ಜನರು ತಮ್ಮ ಕಷ್ಟಗಳಿಗೆ ದುಷ್ಟಶಕ್ತಿ ಮತ್ತು ಮಾಟ ಮಂತ್ರ ಕಾರಣವೆಂದು ತಿಳಿಯುತ್ತಾರೆ. ಅದನ್ನು ಕಳೆಯಲು ಅಂದರೆ ಕಷ್ಟವನ್ನು ನಿವಾರಿಸಿಕೊಳ್ಳಲು ಕಣಿಯನ್ ಜ್ಯೋತಿಷಿಗಳ ಬಳಿ ಬರುತ್ತಾರೆ. ಇವರು ಕಡಿಮೆ ಖರ್ಚಿನಲ್ಲಿ ಅಥವ ಉಚಿತವಾಗಿ ತಡೆ ಹೊಡೆಯುವುದು, ತಾಯ್ತು (ಅಂತ್ರ) ಕಟ್ಟಿಕೊಡುವುದು, ನಿಂಬೆ ಹಣ್ಣನ್ನು ಪೂಜಿಸಿ ಕೊಡುವುದು, ಮುಡಿ ಬಳೆ (ತಾಮ್ರ ಅಥವ ಬೆಳ್ಳಿ ಲೋಹದ್ದು) ಮುಂತಾದವುಗಳನ್ನು ನೀಡಿ ದೈವಿಕವಾಗಿ ಪರಿಹಾರ ಸೂಚಿಸುತ್ತಾರೆ.

**ಕಣಿಯರು ಆಚರಿಸುವ ಹಬ್ಬಗಳು ಮತ್ತು ಜಾತ್ರೆಗಳು**

ಕಣಿಯರಿಗೆ ಯುಗಾದಿ ಹಬ್ಬವು ವಿಶೇಷವಾದ ಹಬ್ಬವಾಗಿದೆ. ಇದರೊಂದಿಗೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೆಶ, ಮಹಾನವಮಿ ಮುಂತಾದ ಹಬ್ಬಗಳನ್ನು ವಿಶಿಷ್ಟವಾಗಿ ಆಚರಿಸುತ್ತಾರೆ. ಮನೆಗೆ ಸುಣ್ಣ–ಬಣ್ಣ ಬಳಿದು, ಬೇವು ಮತ್ತು ಮಾವಿನ ಸೊಪ್ಪನ್ನು ತಂದು ಮನೆಯನ್ನು ಶೃಂಗರಿಸಿ ಯುಗಾದಿ ಹಬ್ಬವನ್ನು ಹೊಸ ವರ್ಷದ ಮೊದಲ ದಿನವೆಂದು ಆಚರಿಸುತ್ತಾರೆ. ಅಂದು ಹೊಸ ಪಂಚಾಂಗ ತಂದು ದೇವರಮನೆಯಲ್ಲಿಟ್ಟು ಪೂಜಿಸುತ್ತಾರೆ. ಯುಗಾದಿ ಹಬ್ಬದಂದು ಮನೆಯ ಹಿರಿಯರು, ಯುವಕರು, ಮಕ್ಕಳು ಹೊಸ ಬಟ್ಟೆಗಳನ್ನು ಧರಿಸಿ ಸಂಭ್ರಮಿಸುತ್ತಾರೆ. ಯುಗಾದಿ ದಿನದಂದು ಜಾನುವಾರುಗಳನ್ನು ವಿಶೇಷವಾಗಿ ದನ–ಕರುಗಳನ್ನು ತೊಳೆದು ಶೃಂಗರಿಸಿ ಏರು (ಹೊಲದಲ್ಲಿ ನೇಗಿಲು, ನೊಗ, ಎತ್ತುಗಳನ್ನು ಪೂಜೆ ಮಾಡಿ ಮೂರು ಸುತ್ತು ಉಳುಮೆ ಮಾಡುವುದು) ಕಟ್ಟುತ್ತಾರೆ. ಜೊತೆಗೆ ಬೇವು–ಬೆಲ್ಲ ಸವಿದು ಬೆಲ್ಲ ಮತ್ತು ಹಣ್ಣುಗಳಿಂದ ಪಾನಕ ಮಾಡಿ ತಾವು ಸೇವಿಸಿ ಸಂಬಂಧಿಕರಿಗೂ ಕೊಡುತ್ತಾರೆ. ಗುಂಡ್ಲುಪೇಟೆ ಮತ್ತು ಚಾಮರಾಜನಗರ ಭಾಗದದಲ್ಲಿ ಹಸಿ ಕಡಲೆ ಮತ್ತು ಅಕ್ಕಿಯನ್ನು ನೆನೆಯಿಸಿ ಅದಕ್ಕೆ ಪೂಜಿಸಿದ ತೆಂಗಿನ ಕಾಯಿ ಮಿಶ್ರಣ ಮಾಡಿ ಪಾನಕದೊಂದಿಗೆ ತಿನ್ನುತ್ತಾರೆ. ಅಂದು ಮನೆಗೆ ಬರುವ ದಾಸಪ್ಪ–ಗುಡ್ಡಪ್ಪರವರಿಗೂ ದವಸ–ಧಾನ್ಯದ ಜೊತೆಗೆ ಪಾನಕ ಮತ್ತು ನೆನೆಸಿದ ಹಸಿ–ಕಡಲೆಯನ್ನು ತಿನ್ನಲು ನೀಡುತ್ತಾರೆ. ದನ ಕರುಗಳಿಗೆ ಅಕ್ಕಿಯ ಜೊತೆಗೆ ಹಸಿ

ಕಡಲೆ, ಬೆಲ್ಲ, ಬಾಳೆಹಣ್ಣನ್ನು ತಿನ್ನಿಸುತ್ತಾರೆ. ಯುಗಾದಿ ಹಬ್ಬದ ಮರುದಿನ ಹೊಸತೊಡಕನ್ನು ಆಚರಿಸುತ್ತಾರೆ. ಅಂದು ಮನೆಯಲ್ಲಿ ವಿಶೇಷವಾಗಿ ಮಾಂಸದ ಅಡುಗೆಯನ್ನು ತಯಾರಿಸಿ ಸಂಭ್ರಮಿಸುತ್ತಾರೆ.

ಯುಗಾದಿ ಹಬ್ಬದಂತೆ ಸಂಕ್ರಾಂತಿ ಹಬ್ಬವನ್ನು ಕೂಡ ಸಂಭ್ರಮದಿಂದ ಆಚರಿಸುತ್ತಾರೆ. ಚಾಮರಾಜನಗರ ಮತ್ತು ಮೈಸೂರು ಭಾಗದ ಕಣಿಯರು ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಹುಲಗನಮರಡಿ ವೆಂಕಟರಮಣಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಮೇಲುಕೋಟೆ ಚಲುವನಾರಾಯಣ ಸ್ವಾಮಿ, ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಶ್ರೀ ವೆಂಕಟರಮಣ ಸ್ವಾಮಿ ದೇವಾಲಯಗಳಿಗೆ ಬೇಟಿ ನೀಡಿ ಪೂಜೆ ಸಲ್ಲಿಸಿ ಹರಕೆ ತೀರಿಸುತ್ತಾರೆ. ಇದರೊಂದಿಗೆ ವಿಶೇಷವಾಗಿ ಈ ಹಬ್ಬದ ದಿನದಂದು ಚಂದ್ರನಿಗೆ ಪೂಜೆ ಸಲ್ಲಿಸಿ ಉತ್ತಮ ಬೆಳೆ ಮತ್ತು ಪ್ರಾಣಿ ರಕ್ಷಣೆಗೆ ದೇವರನ್ನು ಕೋರುತ್ತಾರೆ. ಕೆಲವೆಡೆ ಸಂಕ್ರಾಂತಿ ಹಬ್ಬದಂದೂ ದನಕರುಗಳನ್ನು ತೊಳೆದು ಪೂಜಿಸಿ ಒಣ ಹುಲ್ಲಿನಿಂದ ಬೆಂಕಿ ಹಾಕಿ ಕಿಚ್ಚಾಯಿಸುತ್ತಾರೆ.

ದೀಪಾವಳಿಯಂದೂ ಕೂಡ ಹೊ ಬಟ್ಟೆಯನ್ನು ಧರಿಸಿ ವಿವಿಧ ನಮೂನೆಯ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸುತ್ತಾರೆ. ಅಂದು ಹೋಳಿಗೆ–ಪಾಯಸದ ಅಡುಗೆ ಮಾಡಿ ಮನೆ ಮಂದಿಯೆಲ್ಲ ಒಟ್ಟಾಗಿ ಕುಳಿತು ಊಟ ಮಾಡುತ್ತಾರೆ. ಷಷ್ಠಿ ಹಬ್ಬದಂದು ಹುತ್ತಕ್ಕೆ ತನಿ (ಹಾಲು) ಎರೆದು ಸುಬ್ರಮಣ್ಯನನ್ನು ಪೂಜಿಸುತ್ತಾರೆ. ಯಾವುದೇ ಸಂಕಷ್ಟ ಎದುರಾದಾಗ ವಿಶೇಷವಾಗಿ ಚರ್ಮಸಂಬಂಧಿತ ಸಮಸ್ಯೆಗಳು ಬಂದಾಗ ಸುಬ್ರಮಣ್ಯಸ್ವಾಮಿಗೆ ಹರಕೆ ಹೊತ್ತು ಷಷ್ಠಿಯ ಸಂದರ್ಭದಲ್ಲಿ ಹರಕೆ ತೀರಿಸುತ್ತಾರೆ.

ಕಣಿಯರು ಮಹಾನವಮಿ/ಆಯುದಪೂಜೆ ಹಬ್ಬವನ್ನು ಆಚರಿಸುತ್ತಾರೆ. ದುರ್ಗಾದೇವಿ/ಚಾಮುಂಡೇಶ್ವರಿ ಶಕ್ತಿ ದೇವತೆಯಾಗಿದ್ದು, ಶತ್ರುಗಳನ್ನು ಸಂಹರಿಸಲು ಸಹಕಾರಿ ಎಂದು ನಂಬುತ್ತಾರೆ. ಮಹಾನವಮಿ ಹಬ್ಬದಲ್ಲಿ ಮಾತ್ರವಲ್ಲದೆ ದಿನಂಪ್ರತಿ ದುರ್ಗಾದೇವಿಯನ್ನು ವಿಶೇಷವಾಗಿ ಪೂಜಿಸುತ್ತಾರೆ.

ಇತರ ಹಬ್ಬಗಳಂತೆ ಶ್ರೀರಾಮ ನವಮಿ ಅಂದರೆ ಶ್ರೀರಾಮ ದೇವರ ಜನ್ಮದಿನವನ್ನು ಕಣಿಯರು ವಿಶಿಷ್ಟವಾಗಿ ಆಚರಿಸುತ್ತಾರೆ. ಅಂದು ಅವರು ತಮ್ಮ ಮನೆಯಲ್ಲಿ ರಾಮನ ಪಟವಿಟ್ಟು ಶ್ರದ್ಧೆ, ಭಕ್ತಿ ಮತ್ತು ಭಯದಿಂದ ಪೂಜಿಸುತ್ತಾರೆ. ಅಂದು ಬಂಧು–ಬಳಗ, ಸ್ನೇಹಿತರನ್ನು ಮನೆಗೆ ಆಹ್ವಾನಿಸಿ ಊಟ ಬಡಿಸಿ ಸಂಭ್ರಮಿಸುತ್ತಾರೆ. ಈ ಹಬ್ಬವನ್ನು ಮನೆಯಲ್ಲಿ ಮಾತ್ರವಲ್ಲದೆ ಗ್ರಾಮದಲ್ಲಿಯೂ ಕೂಡ ಸಮುದಾಯದವರೆಲ್ಲ ಒಂದೆಡೆ ಸೇರಿ ಮುಖಂಡನ ನೇತೃತ್ವದಲ್ಲಿ ಹಬ್ಬ ಆಚರಿಸುತ್ತಾರೆ. ಅಂದು ಅವರು ಮಜ್ಜಿಗೆ–ಪಾನಕವನ್ನು ಎಲ್ಲರಿಗೂ ಹಂಚಿ ಸಂಭ್ರಸುವುದರ ಮುಖೇನ ರಾಮನವಮಿಯನ್ನು ಆಚರಿಸುತ್ತಾರೆ. ಹಬ್ಬಕ್ಕೆ ತಗಲುವ ವೆಚ್ಚವನ್ನು ಪ್ರತಿ ಕುಟುಂಬದಿಂದ ಸಮನಾಗಿ ಸಂಗ್ರಹಿಸುತ್ತಾರೆ. ಹಬ್ಬದ ದಿನದಂದು ರಾಮ, ಸೀತೆ ವಿಗ್ರಹ ಅಥವಾ ಚಿತ್ರಪಟವನ್ನಿಟ್ಟು ಊರಿನ ಎಲ್ಲ ರಸ್ತೆಗಳಲ್ಲಿ ಮೆರವಣಿಗೆ ಮಾಡುತ್ತಾರೆ.

ಕಣಿಯರು ಚೈತ್ರಮಾಸದಲ್ಲಿ (ಮಾರ್ಚ್–ಏಪ್ರೀಲ್) ಬಿಳಿಗಿರಿರಂಗನ ಬೆಟ್ಟದಲ್ಲಿ ನಡೆಯುವ ದೊಡ್ಡಜಾತ್ರೆಯಲ್ಲಿ ಭಾಗವಹಿಸಿ ವಿಶೇಷವಾಗಿ ಪೂಜೆಸಲ್ಲಿಸುತ್ತಾರೆ. ಅದರಂತೆ ನಂಜನಗೂಡಿನ ನಂಜುಂಡೇಶ್ವರ, ಮೇಲುಕೋಟೆ ಚಲುವನಾರಾಯಣ ಸ್ವಾಮಿ ಜಾತ್ರೆಯಲ್ಲಿ ಭಾಗವಹಿಸಿ ಮಕ್ಕಳಿಗೆ ನಾಮಕರಣ ಮಾಡುತ್ತಾರೆ.

**ದಾಸ ಪರಂಪರೆ**

ದಾಸ ಪರಂಪರೆ ಅಥವಾ ದೇವರಿಗೆ ದಾಸಪ್ಪನ್ನು ಬಿಡುವುದನ್ನು ಕಣಿಯನ್ ಸಮುದಾಯದವರಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಬಿಳಿಗಿರಿರಂಗನಾಥಸ್ವಾಮಿಯ ಒಕ್ಕಲಿನವರು ಕುಟುಂಬದ ಹಿರಿಯ ಮಗನಿಗೆ ಹೂ ಅಥವ ಶಂಖ ಚಕ್ರ ಮುದ್ರೆಯನ್ನು ಹಾಕಿಸುವುದರ ಮೂಲಕ ದಾಸಪ್ಪನನ್ನು ಬಿಡುತ್ತಾರೆ. ದಾಸಪ್ಪ ಬಿಡುವಾಗ ವಿಶಿಷ್ಟ ಸಂಪ್ರದಾಯ/ಆಚರಣೆಯನ್ನು ಕಣಿಯನ್ ಸಮುದಾಯದವರಲ್ಲಿ ಕಾಣಬಹುದಾಗಿದೆ. ದಾಸಪ್ಪ ಬಿಡುವ ದಿನ ತಮ್ಮ ಸಂಬಂಧಿಕರು, ಕುಲ ಭಾಂದವರನ್ನು ಆಹ್ವಾನಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಅಂದು ದಾಸಪ್ಪ ಬಿಡುವ ವ್ಯಕ್ತಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ಧರಿಸಿ, ಮಾಡಿದ ಅಡುಗೆ (ಮಾಂಸ ಹಾರ, ಸಿಹಿತಿನಿಸು ಮಂತಾದವು)ಯನ್ನು ಬಿಳಿಗಿರಿ ರಂಗಸ್ವಾಮಿ ಮುಂದೆ ನೈವೇದ್ಯವಿಟ್ಟು ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸಿದ ನಂತರ ಹಿರಿಯ ದಾಸಪ್ಪ ಅಥವಾ ಬಿಳಿಗಿರಿ ರಂಗನ ಬೆಟ್ಟದ ಪುರೋಹಿತರು ಎಡ ಮತ್ತು ಬಲ ಭುಜಗಳ ಮೇಲೆ ಶಂಖ ಚಕ್ರಗಳ ಮುದ್ರೆಯನ್ನು ಹಾಕುತ್ತಾರೆ (ಒತ್ತುತ್ತಾರೆ). ಕೆಲವು ಸಂದರ್ಭಗಳಲ್ಲಿ ಸಣ್ಣ ಮಕ್ಕಳಿಗೆ ಮುದ್ರೆ ಒತ್ತಿಸುವಾಗ ಹೂವಿನಿಂದ ಮುದ್ರೆಯನ್ನು ಒತ್ತಿಸುತ್ತಾರೆ. ಅಂದಿನಿಂದ ಆ ವ್ಯಕ್ತಿಯು ದಾಸಪ್ಪನಾಗುತ್ತಾನೆ. ದಾಸಪ್ಪನಾದವನು ಬೇರೆಯವರ ಎಂಜಲು ತಿನ್ನುವಂತಿಲ್ಲ. ಬೇರೆಯವರ ಉಡುಗೆ–ತೊಡುಗೆ ತೊಡುವಂತಿಲ್ಲ ಮತ್ತು ಪ್ರತಿ ಶನಿವಾರ ಸ್ನಾನ ಮಾಡಿ ಮಡಿಯಾಗಿ ರಂಗನಾಥ ಸ್ವಾಮಿಗೆ ಎಡೆಯಿಟ್ಟು ಪೂಜಿಸಬೇಕು.

ದಾಸಪ್ಪನಾದವನು ಸಾಮಾನ್ಯವಾಗಿ ಶಂಖ, ಜಾಗಟೆ, ಬೋನಾಸಿ (ಭವನಾಶಿ), ಜೋಳಿಗೆಯನ್ನು ತನ್ನೊಂದಿಗೆ ಒಯ್ಯುತ್ತಾನೆ. ಪ್ರತಿ ಶನಿವಾರ ಮತ್ತು ಶ್ರಾವಣ ಶನಿವಾರದಂದು ಇವುಗಳೊಂದಿಗೆ ಬೇರೆ–ಬೇರೆ ಮನೆಗಳಲ್ಲಿ ಸಾಂಕೇತಿಕವಾಗಿ ಬಿಕ್ಷೆ–ಬೇಡುತ್ತಾರೆ. ಬಿಕ್ಷೆ ಬೇಡುವುದು ದೇವರಿಗೆ ಅರ್ಪಿಸಲೇ ಹೊರತು ಜೀವನ ನಿರ್ವಹಣೆಗಲ್ಲ ಅಥವ ಕಾಯಕವಾಗಿರುವುದಿಲ್ಲ. ಬಿಕ್ಷೆಯಿಂದ ಸಂಗ್ರಹಿಸಿದ ಧವಸ–ಧಾನ್ಯಗಳಿಂದ ಅಡುಗೆ ಮಾಡಿ ನೈವೇದ್ಯ ರೂಪದಲ್ಲಿ ದೇವರಿಗೆ ಸಮರ್ಪಿಸಲಾಗುತ್ತದೆ. ಮದುವೆಗೆ ದೇವರು ತರಲು, ಹರಿಸೇವೆ ಮಾಡಲು, ಸೂತಕ ಕಳೆಯಲು ಇತ್ಯಾದಿ ಸಂದರ್ಭದಲ್ಲಿ ದಾಸಪ್ಪನ ಮಾತ್ರ ಪ್ರಮುಖವಾಗಿರುತ್ತದೆ.

ಕಣಿಯರು ಇತರ ಸಮುದಾಯದವರಂತೆ ಕುರಿ, ಕೋಳಿ ಮತ್ತು/ಅಥವ ಮೇಕೆಯನ್ನು ಬಲಿ ನೀಡಿ ಮಾಂಸಹಾರವನ್ನು ಬಿಳಿಗಿರಿರಂಗನಾಥ ಸ್ವಾಮಿಗೆ ಎಡೆ (ನೈವೇದ್ಯ) ಇಡುತ್ತಾರೆ. ಸಾಮಾನ್ಯವಾಗಿ ಕಣಿಯನ್ ಸಮುದಾಯದವರು ತಮ್ಮ ದಾಯಾದಿಗಳೂ ಅಥವ ಊರಿನವರನ್ನು ಆಷಾಡ, ಚಿಕ್ಕಜಾತ್ರೆ ಅಥವ ದೊಡ್ಡ ಜಾತ್ರೆಯ ಸಂದರ್ಭದಲ್ಲಿ ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಕಣಿಯರು ಹರಿಸೇವೆ ಎಂದು ಕರೆಯುತ್ತಾರೆ.

ದೇವರಿಗೆ ಪ್ರಾಣಿಯನ್ನು ಬಲಿಕೊಟ್ಟ ನಂತರ ಅಡುಗೆ ಮಾಡಿ ಮೊದಲು ದೇವರಿಗೆ ಎಡೆ ಇಟ್ಟು ನಂತರ ತಮ್ಮ ಬಂಧು–ಬಾಂಧವರಿಗೆ ಉಣಬಡಿಸುತ್ತಾರೆ. ಕಣಿಯನ್ ಸಮುದಾಯದವರು ಸಾಮಾನ್ಯವಾಗಿ ಹಿರಿಯ ಮಕ್ಕಳನ್ನು ದಾಸ ಬಿಡುವುದು ಅಥವ ಕಷ್ಟ–ನೋವುಗಳ ನಿವಾರಣೆಗೆ ಅಥವ ಮಕ್ಕಳಿಲ್ಲದವರು ಮಕ್ಕಳ ಪಡೆಯಲು ಹರಕೆ ಹೊತ್ತಿರುತ್ತಾರೆ. ಹರಕೆಯು ಈಡೇರಿದರೆ ತಮ್ಮ ಶಕ್ತ್ಯಾನುಸಾರ ಪ್ರಾಣಿ ಬಲಿಕೊಟ್ಟು ತಮ್ಮ ಹರಕೆ ತೀರಿಸುತ್ತಾರೆ. ಸಾಮಾನ್ಯವಾಗಿ ಪೂಜಿಸುವಾಗ ಬಿಳಿಗಿರಿರಂಗನಾಥಸ್ವಾಮಿ ಪಟ, ಕೆಂಚಣ್ಣನ

ಮುಖವಾಡ (ಹರಿಗೆ), ಶಂಖ, ಜಾಗಟೆ, ಬೋನಾಸಿ ಮುಂತಾದವುಗಳನ್ನು ಇಟ್ಟು ಪೂಜಿಸುತ್ತಾರೆ. ಪೂಜಿಸುವಾಗ ಗಂಟೆ, ಜಾಗಟೆ ಬಾರಿಸುವುದರ ಜೊತೆಗೆ ಶಂಖದಿಂದ ನಾದವನ್ನು ಹೊರ ಹೊಮ್ಮಿಸುತ್ತಾರೆ.

ಕಣಿಯರು ಕಳಸವನ್ನು ವಿಶೇಷವಾಗಿ ಪೂಜಿಸುತ್ತಾರೆ. ಕಳಸವನ್ನು ಪೂಜಿಸುವುದು ಹಿಂದೂ ಧರ್ಮದಲ್ಲಿ ವಿಶಿಷ್ಟವಾಗಿದೆ. ಕಳಸವನ್ನು ತಾಮ್ರದ ಚೆಂಬು/ಪಾತ್ರೆಯಲ್ಲಿ ನೀರನ್ನು ತುಂಬಿ, ಆ ನೀರಿನೊಳಗೆ ಒಂದು ರೂ ನಾಣ್ಯ, ಸುತ್ತಲೂ ಐದು ವೀಳ್ಯೆದ ಎಲೆ, ಐದು ಮಾವಿನ ಎಲೆಯನ್ನು ಚೆಂಬಿನ ಮೇಲೆ ಜೋಡಿಸಿ ಅದರ ಮೇಲೆ ತೆಂಗಿನಕಾಯಿ ಇಟ್ಟು ಪೂಜಿಸುತ್ತಾರೆ. ಕಳಸವನ್ನು ಸತ್ಯನಾರಾಯಣ ಪೂಜೆ, ನಾಗ ಪಂಚಮಿ, ವಿನಾಯಕ ಚತುರ್ಥಿ, ವರಮಹಾಲಕ್ಷ್ಮಿ ಹಬ್ಬಗಳ ಜೊತೆಗೆ ಮದುವೆ ಕಾರ್ಯ, ಗೃಹಪ್ರವೇಶ ಮುಂತಾದ ಸಂದರ್ಭಗಳಲ್ಲಿಯೂ ಕೂಡ ದೇವರ ಮುಂದಿಟ್ಟು ಪೂಜಿಸುತ್ತಾರೆ.

ಯಾವುದೇ ಸಮುದಾಯದವರ ಜೀವನದಲ್ಲಿ ಕಷ್ಟ–ಸುಖ, ರೋಗ ರುಜಿನ ಸಾಮಾನ್ಯ. ಇಂತಹ ಕಷ್ಟಗಳು ಎದುರಾದಾಗ ತಮ್ಮ ಮನೆ ದೇವರ ಜೊತೆಗೆ ಶನಿ ದೇವರನ್ನು ಪೂಜಿಸುವ ವಾಡಿಕೆಯಿದೆ. ಅದರಂತೆ ಕಣಿಯರು ಕೂಡ ಇದಕ್ಕೆ ಹೊರತಲ್ಲ. ಇವರು ಕೂಡ ಕಷ್ಟ ಬಂದಾಗ ಶನಿ ದೇವರ ದೇವಸ್ಥಾನಕ್ಕೆ ಹೋಗಿ ತುಳಸಿ ಹೂ ಮಾಲೆ ಅರ್ಪಿಸಿ ಪೂಜಿಸುತ್ತಾರೆ. ಸಾಮಾನ್ಯವಾಗಿ ಮೂರು ಅಥವ ಐದು ಅಥವ ಏಳು ಅಥವ ಒಂಭತ್ತು ಶನಿವಾರ ಶನಿದೇವರ ದೇವಸ್ಥಾನಕ್ಕೆ ಹೋಗಿ ಪೂಜಿಸುವುದನ್ನು ಕಾಣಬಹುದಾಗಿದೆ. ಶನಿದೇವರ ಪೂಜೆಯಿಂದ ತಮ್ಮ ಕಷ್ಟಗಳೆಲ್ಲ ಪರಿಹಾರವಾಗಿ ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಕಣಿಯನ್ ಸಮುದಾಯದವರಲ್ಲಿದೆ.

ಬದಲಾದ ಸಂದರ್ಭದಲ್ಲಿ ಕಣಿಯನ್ ಸಮುದಾಯದವರ ಧಾರ್ಮಿಕ ಆಚರಣೆಗಳಲ್ಲಿ ಹಲವಾರು ಬದಲಾವಣೆಗಳಾಗಿವೆ. ಹಿಂದೆ ಶಿವನ್ನು ಪೂಜಿಸುತ್ತಿದ್ದ ಇವರು ನಂತರ ವೈಷ್ಣವ ದೀಕ್ಷೆ ಪಡೆದು ವಿಷ್ಣುವಿನ ಆರಾಧಕರಾಗಿದ್ದಾರೆ. ಹಿಂದೆ ಇವರು ಆಚರಿಸುತ್ತಿದ್ದ ಅನೇಕ ಹಬ್ಬಗಳನ್ನು ವಿವಿಧ ಕಾರಣಗಳಿಂದ ತಮ್ಮ ಗ್ರಾಮಗಳಲ್ಲಿ ಆಚರಿಸುವುದನ್ನು ನಿಲ್ಲಿಸಿದ್ದು, ವರ ಮಹಾಲಕ್ಷ್ಮಿ ಹಬ್ಬ, ತುಳಸಿ ಪೂಜೆ, ವೈಕುಂಟ ಏಕಾದಶಿ ಮುಂತಾದ ಹಬ್ಬಗಳನ್ನು ಆಚರಿಸುವುದನ್ನು ರೂಢಿಸಿಕೊಂಡಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲಿ ಅನೇಕ ಕಣಿಯನ್ ಕುಟುಂಬಗಳು ತಮ್ಮ ಜೀವನ ನಿರ್ವಹಣೆಗಾಗಿ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ವಲಸೆ ಬಂದಿದ್ದು, ಅವರು ನೆಲೆಸಿರುವ ಪ್ರದೇಶಗಳ ಧಾರ್ಮಿಕ ಆಚರಣೆಗಳು ಅವರನ್ನು ಪ್ರಭಾವಿಸಿವೆ. ಅಲ್ಲದೇ ದೃಶ್ಯ ಮಾಧ್ಯಮ, ಸಾಕ್ಷರತೆಯಲ್ಲಿ ಹೆಚ್ಚಳ, ಸಾರಿಗೆ–ಸಂಪರ್ಕ, ಇತರ ಸಮುದಾಯದವರೊಂದಿಗೆ ಬೆರೆಯುವಿಕೆ ಮುಂತಾದ ಕಾರಣಗಳಿಂದ ಇಂದು ತಮ್ಮ ಮೂಲ ಧಾರ್ಮಿಕ ಆಚರಣೆಗಳಲ್ಲಿ ಹಲವಾರು ಬದಲಾವಣೆಯನ್ನು ತಂದುಕೊಂಡಿದ್ದಾರೆ.

ಮೂಲತಃ ಪ್ರಕೃತಿ ಆರಾಧಕರಾದ ಕಣಿಯರು ನೀರು, ಸೂರ್ಯ, ಮರಗಿಡ, ಪ್ರಾಣಿ ಪಕ್ಷಿಗಳಲ್ಲೂ ಕೂಡ ದೇವರನ್ನು ಕಾಣುತ್ತಾರೆ. ನೀರನ್ನು ಸಾಮಾನ್ಯ ಪರಿಭಾಷೆಯಲ್ಲಿ ಗಂಗೆ ಎಂದು ಕರೆಯುತ್ತಾರೆ. ಕಣಿಯರು ನೀರನ್ನು ಪವಿತ್ರವೆಂದು ಪೂಜಿಸುತ್ತಾರೆ. ಇವರು ಯಾವುದೇ ಹಬ್ಬವನ್ನು ಆಚರಿಸುವ ಮುನ್ನ 'ಹೊಸ ನೀರು' ತರುವ ಪದ್ಧತಿ ರೂಢಿಯಲ್ಲಿದೆ. ವಿವಾಹದ ಸಂದರ್ಭದಲ್ಲಿ, ಸೂತಕ ಕಳೆಯುವ ಸಂದರ್ಭದಲ್ಲಿ ನೀರನ್ನು ಪೂಜಿಸುತ್ತಾರೆ. ಇದಕ್ಕೆ ಅವರು ಗಂಗೆಪೂಜೆ ಎಂದು ಕರೆಯುತ್ತಾರೆ. ಗಂಗೆ/ನೀರನ್ನು ಪೂಜಿಸಿದರೆ ತಮ್ಮ

ಕಷ್ಟಗಳೆಲ್ಲ ನೀರಿನಂತೆ ಕರಗಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಇದಲ್ಲದೆ ಭೂಮಿಗೆ ಮೊದಲ ಮಳೆ ಬಿದ್ದಾಗ, ಕೆರೆ ತುಂಬಿದಾಗ, ಅಣೆಕಟ್ಟುಗಳು ತುಂಬಿದಾಗ ಮಾತೃಸ್ವರೂಪಿ ಗಂಗೆಗೆ ಬಾಗಿನ ಅರ್ಪಿಸುತ್ತಾರೆ. ಅಲ್ಲದೆ ನೀರನ್ನು/ಗಂಗೆಯನ್ನು ಶಿವನ ಪತ್ನಿ ಎಂಬುದಾಗಿ ಕೂಡ ಪೂಜಿಸುವ ವಾಡಿಕೆಯಿದೆ.

ನೀರು ಮಾತ್ರವಲ್ಲದೆ ಜಗಕ್ಕೆ ಬೆಳಕು ನೀಡುವ ಸೂರ್ಯನನ್ನು ಕೂಡ ಬೆಳಿಗ್ಗೆ ಎದ್ದಾಕ್ಷಣ ಮೂಡಣ (ಪೂರ್ವ) ದಿಕ್ಕಿಗೆ ತಲೆ ಬಾಗಿ ನಮಸ್ಕರಿಸುತ್ತಾರೆ. ಸೂರ್ಯ ಉದಯಿಸುವ ಮುನ್ನ ನಿದ್ರೆಯಿಂದ ಮೇಲೆದ್ದು, ಮನೆ ಅಂಗಳವನ್ನು ಸ್ವಚ್ಛಗೊಳಿಸಿ ಸಗಣಿ ನೀರನ್ನು ಹಾಕಿ, ರಂಗೋಲಿ ಬಿಟ್ಟು ಸೂರ್ಯನನ್ನು ಸ್ವಾಗತಿಸುತ್ತಾರೆ. ಅಲ್ಲದೇ ಮೂಲತಃ ಪಾರಂಪರಿಕ ವೈದ್ಯರಾದ ಕಣಿಯರು ಗಿಡಮೂಲಿಕೆ ಔಷದ ನೀಡುವಾಗ ಸೂರ್ಯ ಮತ್ತು ತಮ್ಮ ಮನೆದೇವರನ್ನು ಆರಾಧಿಸಿ ನೀಡುತ್ತಾರೆ.

ಹಿಂದೂ ಸಂಪ್ರದಾಯದಲ್ಲಿ ಭೂಮಿಗೆ ಹೆಣ್ಣಿನ ಸ್ಥಾನ ನೀಡಲಾಗಿದೆ. ಭೂಮಿಯನ್ನು ದೇವರೆಂದು , ಮಾತೃಸ್ವರೂಪಿ ಎಂದು ಪೂಜಿಸಲಾಗುತ್ತದೆ. ಭೂಮಿಗೆ ಮೊದಲ ಮುಂಗಾರು ಮಳೆಯಾದ ಸಂದರ್ಭದಲ್ಲಿ ಮತ್ತು ಯುಗಾದಿ ಹಬ್ಬದ ದಿನ 'ಏರು'ಕಟ್ಟಿ ತಮ್ಮ ಹೊಲದಲ್ಲಿ ಮೂರು ಅಥವ ಐದು ಸುತ್ತು ಉಳುಮೆ ಮಾಡಿ ಭೂಮಿಯನ್ನು ಪೂಜಿಸುತ್ತಾರೆ. ಹಾಗೂ ಬಿತ್ತನೆ ಮಾಡುವ ಮೊದಲು ಬಿತ್ತನೆ ಬೀಜ, ಎತ್ತುಗಳು ಮತ್ತು ನೇಗಿಲು ನೊಗಗಳನ್ನು ಪೂರ್ವಾಭಿಮುಖವಾಗಿ ನಿಲ್ಲಿಸಿ ಸೂರ್ಯ, ಆಕಾಶ ಮತ್ತು ಭೂಮಿಯನ್ನು ಪೂಜಿಸುತ್ತಾರೆ. ಇದರಿಂದ ಉತ್ತಮ ಬೆಳೆಯಾಗುತ್ತದೆ ಎಂಬ ನಂಬಿಕೆ ಕಣಿಯರನ್ನೊಳಗೊಂಡಂತೆ ಗ್ರಾಮೀಣ ಪ್ರದೇಶದ ಜನರ ನಂಬಿಕೆಯಾಗಿದೆ.

ಹಿಂದೆ ಬಹುತೇಕ ಗ್ರಾಮೀಣ ಸಮುದಾಯದಲ್ಲಿ ಸತ್ಯನಾಯಣ ಪೂಜೆ ಅಥವ ಲಕ್ಷ್ಮಿ ಪೂಜೆ ಮಾಡುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ವರ್ಷಕ್ಕೆ ಒಮ್ಮೆ ಅಥವ ಗೃಹ ಪ್ರವೇಶ, ಮದುವೆ ಅಥವ ನಾಮಕರಣದಂತಹ ಸಂದರ್ಭಧಲ್ಲಿ ಸತ್ಯ ನಾರಾಯಣ ಪೂಜೆ ಮತ್ತು ಲಕ್ಷ್ಮಿ ಪೂಜೆ ಮಾಡುವುದು ಮತ್ತು ಬ್ರಾಹ್ಮಣ ಪುರೋಹಿತರ ಮೂಲಕ ಮಾಡಿಸುವುದು ಕಂಡು ಬರುತ್ತದೆ. ಈ ಪೂಜೆಯನ್ನು ನಾವು ಕಣಿಯನ್ ಸಮುದಾಯದ ಕುಟುಂಬದಲ್ಲಿಯೂ ಕೂಡ ಕಾಣಬಹುದಾಗಿದೆ. ಸತ್ಯ ನಾರಾಯಣ ಪೂಜೆ ಮಾಡಿಸಿದ ನಂತರ 49 ದಿನಗಳ ಕಾಲ ಶ್ರದ್ಧೆ ಮತ್ತು ಭಕ್ತಿಯಿಂದ ದೀಪ ಹಚ್ಚಿ ಬೆಳಿಗ್ಗೆ ಮತ್ತು ಸಂಜೆ/ರಾತ್ರಿ ಪೂಜೆ ಮಾಡುತ್ತಾರೆ. ಈ ಅವಧಿಯಲ್ಲಿ ಪೂಜಿಸುವಷ್ಟು ದಿನ ಮಾಂಸಾಹಾರ ಸೇವನೆ ಮಾಡುವುದಿಲ್ಲ. ಒಂದು ವೇಳೆ ಮಾಂಸಾಹಾರ ಸೇವಿಸಿದರೆ ಪೂಜೆ ಫಲಿಸುವುದಿಲ್ಲ ಎಂಬ ನಂಬಿಕೆಯಿದೆ.

ಧರ್ಮ ಮತ್ತು ಧಾರ್ಮಿಕ ಆಚರಣೆ ಎನ್ನುವುದು ಮನುಷ್ಯ ಜೀವನದ ಅವಿನಾಭಾವ ಸಂಬಂಧವಾಗಿದೆ. ಸಾಮಾಜಿಕ, ಆರ್ಥಿಕ ಮತ್ತು ಜೈವಿಕ ಅಗತ್ಯಗಳಂತೆ ಧರ್ಮವೂ ಕೂಡ ಒಂದಾಗಿದೆ. ಧರ್ಮವು ಮನುಷ್ಯ ಮನುಷ್ಯರ ನಡುವಿನ ಸಂಬಂಧ ಮಾತ್ರವಾಗಿರದೆ ಮಾನವ ಮತ್ತು ಲೌಖಿಕ, ಅಲೌಖಿಕ ಅದ್ಭುತವಾದ ಶಕ್ತಿಗಳ ನಡುವಿನ ಸಂಬಂಧವಾಗಿದೆ. ಅದೇ ರೀತಿ ಕಣಿಯುನ್ ಸಮುದಾಯದವರು ಕೂಡ ತಮ್ಮದೇಯಾದ ಧಾರ್ಮಿಕ ರೀತಿ–ನೀತಿಗಳನ್ನು ಹೊಂದಿದ್ದು, ಹಿಂದೂ ಧರ್ಮವನ್ನು ಅನುಸರಿಸುತ್ತಿದ್ದಾರೆ. ಹಿಂದು ಧರ್ಮದಲ್ಲಿ ಪ್ರಮುಖವಾಗಿ ಶೈವ ಪಂಥ ಮತ್ತು ವೈಷ್ಣವ ಪಂಥಗಳನ್ನು ನೋಡಬಹುದಾಗಿದ್ದು, ಕಣಿಯರು ವೈಷ್ಣವ ಪಂಥದ ಆರಾಧಕರಾಗಿದ್ದಾರೆ. ಒಟ್ಟಾರೆ ಹೇಳುವುದಾದರೆ ಕಣಿಯನ್ ಸಮುದಾಯದವರು ಪೂಜಾ

ವಿಧಾನಗಳಲ್ಲಿ, ಪೂಜಿಸುವ ದೇವರುಗಳಲ್ಲಿ ಅಲ್ಪ-ಸ್ವಲ್ಪ ಬದಲಾವಣೆಯನ್ನು ಕಾಣಬಹುದಾಗಿದ್ದರೂ ಕೂಡ ಅಧ್ಯನಕ್ಕೊಳಪಡಿಸಿರುವ ಎಲ್ಲಾ ಕುಟುಂಬಗಳು ಕೂಡ ಹಿಂದಿನಿಂದ ಇಂದಿನವರೆಗೂ ಹಿಂದೂ ಧರ್ಮದ ಆರಾಧಕರಾಗಿ ಹಿಂದೂ ಧರ್ಮದಲ್ಲಿಯೇ ಉಳಿದುಕೊಂಡಿದ್ದಾರೆ. ಇವರಲ್ಲಿ ಇತರ ಧರ್ಮಗಳಿಗೆ ಮತಾಂತರವಾಗದಿರುವುದನ್ನೂ ಕೂಡ ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಭಾಮಿನಿ ರಾಘವಯ್ಯ.(2007). ಕೊಡಗಿನ ಬುಡಕಟ್ಟುಗಳು, ಪ್ರಸಾರಂಗ ಮೈಸೂರು. ವಿಶ್ವವಿದ್ಯಾನಿಲಯ, ಮೈಸೂರು.
- ಬೋರಲಿಂಗಯ್ಯ ಹಿ.ಚಿ ಮತ್ತು ಪ್ರಭಾಕರ ಎ.ಎಸ್ (2008) ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಾಯನಕ್ಕೊಂದು ಆಕಾರ ಸಿದ್ಧಾರ್ಥ ಪ್ರಕಾಶನ ಹೊಸಪೇಟೆ.
- ಮಧು ಗುಂಡ್ಲುಪೇಟೆ (2009), ಬುಡಕಟ್ಟು ಜನಾಂಗಗಳ ಒಂದು ಅವಲೋಕನ, ರೂಪ ಪ್ರಕಾಶನ, ಮೈಸೂರು.
- ಸುನಂದಮ್ಮ ಎನ್ (2011) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬುಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳು ಅಭಿರುಚಿ ಗಣೇಶ್ ಸರಸ್ವತಿಪುರಂ ಮೈಸೂರು.
- ಮಂಜುನಾಥ ಬಿ.ಆರ್ (2014) ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು:ಒಂದು ಮಾನವಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ವಂದೇ ಮಾತರಂ ಗ್ರಾಮ ರಕ್ಷಣ ಸಭಾ ತಗಡೂರು (1925). ಕಣಿಯರ ವರ್ಣ ವ್ಯವಸ್ಥೆ. ಶ್ರೀಕೃಷ್ಣರಾಜ ವಾಣಿವಿಲಾಸ ಪ್ರೆಸ್, ಮೈಸೂರು.
- ಪ್ರಜಾವಾಣಿ. 1998, ಕಣಿಯರ ಗೋಳು ಕೇಳಿಸದ ಸರ್ಕಾರ. ಬೆಂಗಳೂರು
- ರಾಜಮಣಿ. (1998) ಕಾಡು ಕುರುಬರು ಕರ್ನಾಟಕ ಬುಡಕಟ್ಟುಗಳು ಸಂಪುಟ-1, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಸತ್ಯ ಶ್ರೀ ಚಾಮರಾಜಪೇಟೆ, ಬೆಂಗಳೂರು, ಪು. 738, 739
- ಮಧು ಗುಂಡ್ಲುಪೇಟೆ. (2002). ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ, ಅಕ್ಷತಾ ಪ್ರಕಾಶನ ಮೈಸೂರು.
- ಬಸವರಾಜು, ಕುರವ. (2000). ಇರುಳರು **ಇಲ್ಲಿ** ಕರ್ನಾಟಕದ ಬುಡಕಟ್ಟುಗಳು, ಹೆಚ್.ಜೆ.ಲಕ್ಕಪ್ಪಗೌಡ (ಸಂ), ಸಂ-1, ಜನಪದ ಮತ್ತು ಯಕ್ಷಗಾನ ಅಕಾಡೆಮೆ, ಬೆಂಗಳೂರು.

- *Castes and Tribes of Southern India/Kaniyan - Wikisource, the free online library*. (n.d.). https://en.wikisource.org/wiki/Castes_and_Tribes_of_Southern_India/Kaniyan
- John, S. S. (2008). Kaniyan: ritual performers of Tamil Nadu, Soutb India. *Asian Ethnology*, *67*(1), 123–135. http://ci.nii.ac.jp/naid/40016271913